ISSN : 2320-0391

साहित्य और संस्कृति

# सृजन ಸೃಜನ

हिंदी-कन्नड त्रैमासिक पत्रिका

ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

अक्टूबर-दिसम्बर - २०१७



IQAC Co-ordinator

Society's SCP Arts, Sci. & DDS Com. C...
MAHALINGPUR
587312

GRADE-1 PRINCIPAL

ಸಾಹಿತ್ಯ ಮತ್ತು ಸಂಸ್ಕೃತಿ

ISSN : 2320-0391

# ಸೃಜನ

ವರ್ಷ-೫ ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ ಅಂಕ-೨೦

## ಕನ್ನಡ ವಿಭಾಗ

Kannad Vibhaga

**ಪ್ರಧಾನ ಸಂಪಾದಕರು**

ಡಾ. ಎಸ್. ಟಿ. ಮೇರವಾಡೆ

**ಸಂಪಾದಕರು**

ಪ್ರೊ. ಬಿ. ಬಿ. ಡೆಂಗನವರ ಡಾ. ಆರ್. ವಿ. ಪಾಟೀಲ

*ಸಿಲುಕದಿರಿ ಮತವೆಂಬ ಮೋಹದಾಜ್ಞಾನಕೆ ! ಮತಿಯಿಂದ ದುಡಿಯಿರೈ ಲೋಕದ ಹಿತಕೆ !*
*ಆ ಮತದ ಈ ಮತದ ಹಳೆ ಮತದ ಸಹವಾಸ ಸಾಕಿನ್ನು, ಸೇರಿರೈ ಮನುಜ ಮತಕೆ, ವಿಶ್ವಪಥಕೆ*
*ಓ ಬನ್ನಿ ಸಹೋದರರೇ, ಬೇಗ ಬನ್ನಿ – ರಾಷ್ಟ್ರಕವಿ ಕುವೆಂಪು*

ತಿದ್ದುವದೆ ಜಂಗಮನ ಹಸಿವೆಯು
ಖುದ್ದುಯಿದರೆಡೆಗಾದರೂ ಪದ
ತಿದ್ದಿಕೊಳದವರೆದುರು–ಬರಹವೆ–ಕೆಲರಿಗಾಹಾರ ।
ಸಿದ್ಧ ಶರಣರ ಶರಣೆಯರ ಸಂ
ಸಿದ್ಧಿ ಸುಧೆಯೊಳ ಮಿಂದು ರಚನೆಯೊ
ಳಿದ್ದು ಸಾಗುವ ಹೊರತು ಮತ್ತೇನಿಹುದು ಉಪಹಾರ – ನಾಗಲಾಂಬಿಕೆ

**ಅಕ್ಟೋಬರ - ಡಿಸೆಂಬರ ೨೦೧೭**

October - December 2017

ವಿಳಾಸ

**ಸೌಮ್ಯ ಪ್ರಕಾಶನ**

'ಕಬೀರ ಕುಂಜ'

ಮಹಾಬಳೇಶ್ವರ ಕಾಲೋನಿ ದರ್ಗಾರೋಡ, ವಿಜಯಪುರ – ೫೮೬ ೧೦೩.

ಮೊ. ೯೪೪೮೧೮೫೭೦೫, ೮೦೫೦೮೭೫೬೬೫

Email : srijantraimasik@gmail.com / stmerwade1961@gmail.com / p.rvpatil1280@gmail.com

ಪತ್ರಿಕೆಯ ಮೂರು ವರ್ಷದ ಶುಲ್ಕ ರೂ. ೧,೫೦೦ ಆಜೀವ ಸದಸ್ಯತ್ವ ರೂ. ೩,೦೦೦ ಸಂದಾಯ ಮಾಡುವವರು ಸೌಮ್ಯ ಪ್ರಕಾಶನ, ವಿಜಯಪುರ ಇವರ ಹೆಸರಿನಲ್ಲಿ ಡಿ.ಡಿ./ಎಂ.ಓ./ಚೆಕ್ ಮುಖಾಂತರ ಕಳುಹಿಸಬಹುದು.

'ಇಲ್ಲಿಯ ಲೇಖನಗಳ ಅಭಿಪ್ರಾಯಗಳು, ಲೇಖಕರವೇ ಹೊರತು ಪತ್ರಿಕೆಯ ಅಭಿಪ್ರಾಯಗಳಲ್ಲ - ಸಂ.'

IQAC Co-ordinator
K.L.E.Society's

MAHALINGPUR 587312

GRADE-1 PRIN PAL
K.L.E.Society
S.C.P.Arts, Science & D.D.S. C merce College,

# ಪರಿವಿಡಿ


೧. ಭಾರತೀಯ ವಾದ್ಯ ಪರಂಪರೆ ಹಾಗೂ ಸುಗಮ ಸಂಗೀತದಲ್ಲಿ ಬಳಕೆಯಾಗುವ ಘನವಾದ್ಯಗಳು • ರೇವಣಸಿದ್ಧೇಶ ಎಂ. ಬೆಣ್ಣೂರ ೨೬

೨. ಸಿನಿಮಾ ಸಂಸ್ಕೃತಿ ಮತ್ತು ಭಾಷೆ • ರೇಖಾ ಸಿದ್ದಪ್ಪ ಹಳೇಮನಿ ೨೯

೩. ಸಮಾಜದಲ್ಲಿ ಮಠ ಮಾನ್ಯಗಳ ಕೊಡುಗೆ • ಡಾ. ಫಕೀರನಾಯ್ಕ. ದುಂ. ಗಡ್ಡಿಗೌಡರ ೩೩

೪. ಡಾ. ಪಂ. ಪುಟ್ಟರಾಜ ಗವಾಯಿಗಳ ಗೇಯ ರಚನೆಗಳು • ವಿಶ್ವನಾಥ ವ್ಹಿ. ಹಿರೇಮಠ ೩೫

೫. ಪದ್ಮವಿಭೂಷಣ ಪಂ. ಕವಿ ಪುಟ್ಟರಾಜ ಗವಾಯಿಗಳವರ ಪಂಚಾಕ್ಷರ ಲಿಪಿ ಪದ್ಧತಿಯ ಒಂದು ಅವಲೋಕನ • ಮಂಜುನಾಥ ಬ. ಭಜಂತ್ರಿ ೪೦

೬. "ಗದುಗಿನ ಗಾನಯೋಗಿ" • ಡಾ. ಗುರುಬಸಪ್ಪ ಬ. ಮಹಾಮನೆ ೪೪

೭. ವೀಣಾ ಹಾಗೂ ಸಿತಾರ ವಾದನದ ಶಿಲ್ಪ ನಿರೂಪಣೆ • ಕಾಶಿಲಿಂಗ ವ್ಹಿ. ಮಠ ೪೭

೮. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತೆ – ಕೃಷ್ಣಾ ಸೋಬ್ತಿ • ಡಾ. ಎಸ್. ಟಿ. ಮೇರವಾಡೆ ೫೪

೯. ತಬಲಾ ವಾದನದಲ್ಲಿ ಹೊಸ ಪ್ರಯೋಗಗಳು • ಡಾ. ಅಯ್ಯಣ್ಣ ಲಿಂ. ದೇಸಾಯಿ ೫೯

೧೦. ವಸಾಹತು ಕಾಲಘಟ್ಟದ ಸಾಂಸ್ಕೃತಿಕ ಪಲ್ಲಟ ಮತ್ತು ಜನಪದರು • ಶ್ವೇತಾ ಎಂ. ಬಿ. ೬೧

೧೧. ಸ್ವಾತಂತ್ರ್ಯ ಸೇನಾನಿ ಸಂಕೇಶ್ವರದ ಅಪ್ಪಣ್ಣಗೌಡರು • ಬಿ. ಆರ್. ಯಲಶೆಟ್ಟಿ ೬೫

೧೨. ಉರಿಲಿಂಗದೇವನ ವಚನಗಳಲ್ಲಿ 'ಸತ–ಪತಿ' ಕಲ್ಪನೆಯ ಅವಲೋಕನ • ಶ್ರೀ ಶಂಕರ ಎಸ್. ಕೋಳಿ ೭೧

೧೩. ಲೂಯಿ ಬ್ರೈಲ್ • ಡಾ. ಆರ್. ವ್ಹಿ. ಪಾಟೀಲ ೭೩


## ಕವಿತೆ


೧೪. ಸಾವದೊಟ್ಟಿಲ ಜೀಕುತ್ತಾ • ಅಜೇಯವರ್ಮಾ ಅಲ್ಲೂರಿ ೭೪


■■


IQAC Co-ordinator
K.L.E.Society's
S.C.P. Arts, Science & D.D.S.Commerce College,
MAHALINGPUR-587312. Dist. Bagalkot.

K.L.E. Society's SCP Arts, Science ... College
MAHALINGPUR 587312

GRADE-1 PRINCIPAL
K.L.E.Society's
S.C.P.Arts, Science & D.D.S Commerce College,
MAHALINGPUR-587312. Dist. Bagalkot.

Uriligadevana Vachanagalalli 'Sati-Pati' Kalpaneya Avalokana

# ಉರಿಲಿಂಗದೇವನ ವಚನಗಳಲ್ಲಿ 'ಸತಿ–ಪತಿ' ಕಲ್ಪನೆಯ ಅವಲೋಕನ

Author- Sri Shankar S. Koli
Dr. Ashok M. Narode

ಸಂಶೋಧನಾ ವಿದ್ಯಾರ್ಥಿ : ಶ್ರೀ ಶಂಕರ ಎಸ್. ಕೋಳಿ
ಮಾರ್ಗದರ್ಶಕರು : ಡಾ. ಅಶೋಕ ಎಮ್. ನರೋಡೆ

ವಿಶ್ವ ಸಾಹಿತ್ಯದಲ್ಲಿ ಕನ್ನಡ ವಚನ ಸಾಹಿತ್ಯ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಅದರಲ್ಲೂ ಭಾರತ ದೇಶದ ಕರ್ನಾಟಕದಲ್ಲಿ ೧೧–೧೨ನೆಯ ಶತಮಾನದಲ್ಲಿ ಬಸವಣ್ಣವರಿಂದ ಬೆಳೆದುಕೊಂಡು ಬಂದ ವಚನ ಸಾಹಿತ್ಯ ಅಂದಿನಿಂದ ಇಂದಿನವರೆಗೆ ಸಮಾಜದ ಅನಿಷ್ಟ ಪದ್ಧತಿಗಳ, ಆಚರಣೆಯ, ಮೂಢನಂಬಿಕೆ, ಜಾತಿ ವ್ಯವಸ್ಥೆ ಮುಂತಾದ ಅಂಶಗಳ ವಿರುದ್ಧ ಎಲೆಯ ಮರೆಯ ಕಾಯಿಯಂತೆ ಸಮಾಜವನ್ನು ಪರಿವರ್ತಿಸಲು ಹೋರಾಟ ನಡೆಸುತ್ತದೆ. ಅಂದಿನ ಹಲವಾರು ವಚನಕಾರರಲ್ಲಿ ಕಾಯಕ ದಾಸೋಹಿ, ನಿಷ್ಠುರ ವಚನಕಾರನಾದ ಉರಿಲಿಂಗ ದೇವ ಹಲವಾರು ವಚನಗಳನ್ನು ರಚಿಸಿದ್ದಾರೆ. ಈವರ ಎಲ್ಲ ವಚನಗಳನ್ನು ಅವಲೋಕನ ಮಾಡಿದಾಗ ಭಕ್ತಿಯ ಜೋತೆಗೆ ಸತಿ–ಪತಿಯ ಭಾವ ಹೇಗಿರುತ್ತದೆ ಎಂಬುದನ್ನು ವಚನಕಾರ ತನ್ನ ವಚನಗಳಲ್ಲಿ ಬಹಳ ಮಾರ್ಮಿಕವಾಗಿ ವ್ಯಕ್ತಪಡಿಸಿದ್ದಾನೆ. ಈತ ಹೇಳುವಂತೆ ಕಾಯಕ ಮತ್ತು ದಾಸೋಹ ತತ್ವಗಳು ಶರಣರ ಎರಡು ಅದ್ಭುತ ಕೊಡುಗೆಗಳಾಗಿರುವಂತೆ, 'ಶರಣ ಸತಿ–ಲಿಂಗ ಪತಿ' ಪರಿಕಲ್ಪನೆ ಸರಳ ಸುಂದರವಾಗಿದೆ. ಆತ್ಮ–ಪರಮಾತ್ಮನ ಅನುಸಂಧಾನವನ್ನು ಲೌಕಿಕ ಅನುಭವದ ಹಿನ್ನಲೆಯಲ್ಲಿ ಅಭಿವ್ಯಕ್ತಿಸುವ ಕ್ರಮವಾಗಿದೆ. ಇಲ್ಲಿ ಪರತತ್ವದಂತಹ ಜಟಿಲ ವಿಷಯವನ್ನು ಜನಸಾಮಾನ್ಯರಿಗೆ ತೀಳಿಯುವಂತೆ ಹೇಳುವ ಪ್ರಯತ್ನವಿದೆ. ಶರಣರ ಕಣ್ಣು ಮುಂದೆ ಇದ್ದವರು ಸಾಮಾನ್ಯ ಜನಸಮುದಾಯ. ಎಲ್ಲರನ್ನೂ ತಲುಪಬೇಕೆನ್ನುವ ಮನಸ್ಸು ವಚನ ರಚನೆಯ ಹಿನ್ನಲೆಯ ಮೂಲ ಆಶಯವಾಗಿದೆ. ಈ ಕಾರಣದಿಂದಾಗಿ ವಚನಗಳು ಸಾಹಿತ್ಯ ಪ್ರಕಾರಕ್ಕೆ ತನ್ಮೂಲಕ ಕನ್ನಡ ನುಡಿಗೆ ಅನೇಕ ನಿಟ್ಟಿನಲ್ಲಿ ಪ್ರಯೋಜನ ಕಾರಿಯಾಗಿದೆ.

ಗಂಡ–ಹೆಂಡರ ಜೀವನದ ಲೌಕಿಕ ಪ್ರೀತಿಯ ಅನುಭವವನ್ನು ಅಲೌಕಿಕವಾದ ಭಕ್ತ–ಭಗವಂತನ ಪ್ರೀತಿಗೆ ಆರೋಪಿಸಿ ಹೇಳುವ ಈ ತಂತ್ರ ವಿಶಿಷ್ಟವಾದುದು. ಅಮೂರ್ತವಾದದ್ದನ್ನು ಮೂರ್ತಿಕರಿಸುವ ಈ ಪ್ರಕ್ರಿಯೆಯಲ್ಲಿ ಅನುಭಾಬ, ಅನುಭವದ ಮಟ್ಟದಲ್ಲಿ ಅಭಿವ್ಯಕ್ತವಾಗಿರುವುದರಿಂದ ಜನ ಸಾಮಾನ್ಯರಿಗೆ ಅದು ಸರಳವಾಗಿ ಮತ್ತು ಪರಿಣಾಮಕಾರಿಯಾಗಿ ತಲುಪಲು ಸಾಧ್ಯವಾಗಿದೆ. 'ಶರಣ ಸತಿ–ಲಿಂಗ ಪತಿ' ಪರಿಕಲ್ಪನೆ ವಚನಗಳಿಗೆ ಹೆಚ್ಚಿನ ಆಯಾಮವನ್ನು, ಮೆರಗನ್ನು ತಂದು ಕೊಟ್ಟಿದೆ. ಭಕ್ತಿ ರಸ ಶೃಂಗಾರ ರಸವಾಗುವ ಪರಿಯನ್ನು ಇಲ್ಲಿ ಕಾಣುತ್ತೇವೆ. ಶೃಂಗಾರ ಮತ್ತು ವಿಪ್ರಲಂಭ ಶೃಂಗಾರದ ಸಂದರ್ಭದಲ್ಲಿ ವಚನಗಳು ಭಾವಗೀತೆಯಂತೆ ಗಮನ ಸೆಳೆಯಲು ಸಾಧ್ಯವಾಗಿದೆ. ಸತಿ–ಪತಿ ಭಾವವನ್ನು ಎಲ್ಲ ಶರಣರು ಒಪ್ಪಿಕೊಂಡಿದ್ದಾರೆ, ಅಪ್ಪಿಕೊಂಡಿದ್ದಾರೆ. ಅಕ್ಕ, ಅವ್ವಾ, ತಾಯಿ, ತಾಯೆ, ಕೇಳದಿ ಎಂಬ ಸಂಬೋಧನೆಗಳು ಅಲ್ಲಿ ಕಾಣಿಸಿಕೊಳ್ಳುವುದು ಈ ಕಾರಣಕ್ಕಾಗಿಯೇ. ಒಂದು ಹೆಣ್ಣಿನ ನೋವನ್ನು ಇನ್ನೊಂದು ಹೆಣ್ಣು ಮಾತ್ರ ಚೆನ್ನಾಗಿ ಅರಿಯಬಲ್ಲಳು.

ಈ 'ಸತಿ–ಪತಿಯ ಭಾವ ಎಲ್ಲ ಶರಣರ ವಚನಗಳಲ್ಲಿ ವ್ಯಕ್ತವಾಗಿದ್ದರು, ಉರಿಲಿಂಗದೇವರ ವಚನಗಳು ಈ ಭಾವವನ್ನೇ ಕೇಂದ್ರವಾಗಿರಿಸಿಕೊಂಡು ಪರಿಭ್ರಮಿಸುತ್ತವೆ.

ಈ ನಲ್ಲನ ಬೇಟದ ಕೂಟದ ಪರಿಯನು
ಏನೆಂದು ಹೇಳುವೆ? ವಿಪರೀತ ಕೆಳದಿ
ಪುರುಷ ಶಕ್ತಿಯಾಗಿ, ಶಕ್ತಿ ಪುರುಷನಾಗಿ
ನೆರೆದು ಸುಖಿಸುವನು ಕೇಳಾ ಕೆಳದಿ
ಅತಿಕಾಮಿ ವಿಪರೀತನು ಉರಿಲಿಂಗದೇವನು
ನೆರೆಯಲು ನೆರೆವುದು ಮನದಿಚ್ಛೆ ಕೆಳದಿ.

ಸತಿಗೆ ಪತಿಯ ಮೇಲೆ ಎಷ್ಟೊಂದು ಪ್ರೀತಿಯಿದೆ ಎಂದು ಸದಾ ಅವನ ಹಿಂದೆಯೇ ಸುತ್ತುತ್ತಾಳೆ. ಆತನೂ ಅತಿಕಾಮಿ ವಿಪರಿತನು. ಇಂಥ ಪ್ರಾಣಪದಕವಾದ ಪತಿಯನ್ನು ನೋಡಿದರೆ ಇನ್ನೂ ನೋಡಬೇಕೆನಿಸುತ್ತದೆ. ಕೂಡುದರೆ ಮತ್ತೆ ಕೂಡಬೇಕೆನಿಸುತ್ತದೆ.

**ಇಬ್ಬರಿಗೊಂದಂಬ ತೊಡವ ಗಡ ಕಾಮಾ**
**ಅರಿದರಿದು ಬಿಲ್ಲುಗಾರ ಹೆಯೋ!**
**ಎಸೆದಿಬ್ಬರು ಒಂದಾಹರು ಗಡ**
**ಇದು ಹೊಸತು, ಚೋದ್ಯವೀ ಸರಳ ಪರಿನೋಡಾ!**
**ಎನಗೆಯೂ, ಉರಿಲಿಂಗದೇವಗೆಯೂ ತೊಟ್ಟೈಸು**
**ನಾವಿಬ್ಬರೊಂದಾಗೆ ಬಿಲ್ಲಾಳಹೆ ಎಸೆಯಲೋ ಕಾಮಾ.**

ಲೋಕದ ಬಿಲ್ಲುಗಾರರು ಬಾಣದ ಹೊಡೆತದಿಂದ ಒಂದು ವಸ್ತುವನ್ನು ಎರಡಾಗಿ ತುಂಡಾಗಿಸುತ್ತಾರೆ, ಬೇರ್ಪಡಿಸುತ್ತಾರೆ. ಆದರೆ, ಕಾಮದೇವ ಅಪರೂಪದ ಬಿಲ್ಲಾಳು ಈತ ಒಂದು ಬಾಣದ ಎಸೆತದಿಂದ ಎರಡನ್ನು ಒಂದಾಗಿ ಮಾಡುವ ಶೂರ! ಹೀಗೆ ತನ್ನನ್ನು ಉರಿಲಿಂಗದೇವನನ್ನೂ ಬೇರಿಲ್ಲದಂತೆ ಬೆಸೆ ಎಂದು ಆಹ್ವಾನಿಸುವ ಪರಿ ಬಲು ಸೊಗಸಾಗಿದೆ. ಕಾದ ಕಬ್ಬಿಣ ನೀರು ಕುಡಿದಂತೆ ಸಮರಸಗೊಳಿಸು ಎಂದು ಈ 'ಸತಿ' ಕಾನನ್ನು ಮೊರೆಯಿಡುವ ಪರಿ ಮಾರ್ಮಿಕವಾಗಿದೆ.

**ಎನ್ನ ನಲ್ಲನೆನ್ನನೊಲ್ಲದಿರ್ದಡೆ ಎಲ್ಲಿ ಅರಸುವೆನವ್ವಾ?**
**ಗಂಗೆಯ ನೋನೆನು, ಗೌರಿಯ ನೋನೆನು.**
**ಎಲ್ಲಿ ಅರಸುವೆನವ್ವಾ,**

ಎನ್ನ ಅಂತರಂಗದ ಆತ್ಮಜ್ಯೋತಿ ಉರಿಲಿಂಗದೇವಾ ಎಂದು ಇಲ್ಲಿಯೇ ಅರಸುವೆನವ್ವಾ

ಕಾಣದಂತೆ ಮಾಯವಾದ ಶಿವನನ್ನು ಎಲ್ಲಿ ಹುಡುಕುವುದು ? ಕೈಲಾಸದಲ್ಲಿರುವನೇ? ಗುಡಿ-ಗುಂಡಾರಗಳಲ್ಲಿರುವನೇ ಗಂಗೆ-ಗೌರಿಯನ್ನು ಕೇಳಬೇಕೆ? ಇದು ಯಾವುದರ ಅವಶ್ಯಕತೆ ಇಲ್ಲ. ಇಲ್ಲಿಯೇ ಅರಸುವೆನವ್ವಾ ಎಂಬ ಪದಪ್ರಯೋಗ ಮಾರ್ಮಿಕವಾಗಿದೆ. ರೋಮ-ರೋಮಗಳಲ್ಲಿ ಅವನೇ ತುಂಬಿಕೊಂಡಿರುವಾಗ ಹೊರಗೆ ಹುಡುಕುವ ಅಗತ್ಯವೇ ಬಿಳುವದಿಲ್ಲ.

**ನಮ್ಮ ನಲ್ಲನ ಕೂಡಿದ ಕೂಟವ ಇದಿರಿಗೆ ಹೇಳಬಾರದವ್ವಾ**
**ನೀವೆಲ್ಲಾ ನಿಮ್ಮ ನಲ್ಲನ ಕೂಡಿದ ಸುಖವ ಬಲ್ಲಂತೆ ಹೇಳಿ**
**ಉರಿಲಿಂಗದೇವ ಬಂದು ನಿರಿಯ ಸೆರಗ ಸಡಿಸಲೊಡನೆ**
**ನಾನೊ ತಾನೊ ಏನೆಂದರಿಯೆನು.**

ನಲ್ಲನ ಕೂಡಿದ ಸುಖದ ಸುಗ್ಗಿಯ ಹೇಳಲು ನಾಚಿಕೆ, ಕೇಳಲು ನಾಚಿಕೆ, ಸುರತದಲ್ಲಿ ಶೂನ್ಯ ಸಿದ್ಧಿಸುವಂತೆ ನಾನು-ತಾನು ಎಂಬ ದ್ವೈತ ಅಳಿಯುತ್ತದೆ. ಉರಿಲಿಂಗದೇವ 'ನಿರಿಯ ಸಡಿಸಲೊಡನೆ' ಎಂಬ ಪದಪ್ರಯೋಗ ಕಾವ್ಯಾತ್ಮಕವಾಗಿದ್ದು ಧ್ವನಿ ಪೂರ್ಣವಾಗಿದೆ.

ಇಂಬಿನ ಚುಂಬನ ಅಮೃತಾಹಾರ, ಆಲಿಂಗನವೆ ಆಭರಣ,

**ಸೋಂಕೆ ವಸ್ತ್ರ, ನೋಟವೆ ಕೂಟ,**
**ಒಡನಾಟವೆ ಅಷ್ಟಬೋಗವೆನಗೆ**
**ಉರಿಲಿಂಗದೇವನ ಕೂಟವೆ ಪರಾಪರ ವಾಙ್ಮನಾತೀತ**
**ಪರಮಸುಖ.**

'ಇಂಬು' ಎಂದರೆ ದೀರ್ಘವಾದ ಮತ್ತು ಸವಿಯಾದ ಈ ಎರಡು ಅರ್ಥದಲ್ಲಿ ಅದು ಬಳಕೆಯಾಗುತ್ತದೆ. "ತೋಳುಗಳಿಗೆ ತೋಳಬಂದಿ, ಕೆನ್ನೆತುಂಬ ಮುತ್ತು" ಎಂಬ ಬೇಂದ್ರೆ ಅವರ ಕವಿತೆಯ ಸಾಲುಗಳು ಇಲ್ಲಿ ನೆನಪಾಗುತ್ತವೆ. ಸತಿ-ಪತಿಯ ಈ ಮಿಲನ ವಾಙ್ಮನಾತೀತ ಪರಮಸುಖ. ಬಾಲಕ ಹಾಲು ಸವಿದಂತೆ, ಮೂಗ ಕಂಡ ಕನಸಿನಂತೆ, ಮಾಗಿಯ ಕೋಗಿಲೆಯಂತೆ' ಅನಿರ್ವಚನೀಯ.

ಈ ರೀತಿಯಾಗಿ ಉರಿಲಿಂಗದೇವ ತನ್ನ ಹಲವಾರು ವಚನಗಳಲ್ಲಿ ಭಕ್ತಿ ಭಾವದ ಜೋತೆಗೆ ಪ್ರೇಮ ಕಾಮ, ಸತಿ-ಪತಿ ಕೂಡುವ ಎಲ್ಲ ಒಳನೋಟಗಳನ್ನು ಜನಸಾಮಾನ್ಯರು ಅವಲೋಕನ ಮಾಡುವಂತೆ ಶೃಂಗಾರ ರಸದ ಮೂಲಕ ಚಿತ್ರಿಸಿದ್ದಾನೆ. ಇದರೊಂದಿಗೆ ಇತನ ವಚನಗಳಲ್ಲಿ ಭಕ್ತಿ ರಸ ಶೃಂಗಾರ ರಸವಾಗುವ ಪರಿಯನ್ನು ಕಾಣಬಹುದಾಗಿದೆ.

■■

---

*ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ವಿಭಾಗ, ರಾ.ಚ.ವಿ.ವಿ ಬೆಳಗಾವಿ. ಮಾರ್ಗದರ್ಶಕರು : ಡಾ. ಅಶೋಕ ಎಮ್. ನರೋಡೆ ಸಹ ಪ್ರಾಧ್ಯಾಪಕರು, ಕೆ.ಎಲ್.ಇ ಪದವಿ ಮಹಾವಿದ್ಯಾಲಯ, ಮಹಾಲಿಂಗಪುರ*



IQAC Co-ordinator
K.L.E.Society's
S.C.P. Arts, Science & D.D.S.Commerce College,
MAHALINGPUR-587312. Dist. Bagalkot.

GRADE-1 PRINCIPAL
K.L.E.Society's
S.C.P.Arts, Science & D.D.S Commerce College,
MAHALINGPUR-587312. Dist. Bagalkot.

RNI Regd. No. KARBIL/2014/54464

Postal Regd. No/ PMG/KA/NK/BJP/60/2017-19



क्या पूजन क्या अर्चन रे ?

उस असीम का सुन्दर मन्दिर मेरा लघुतम जीवन रे ।

मेरी श्वासें करती रहतीं नित प्रिय का अभिनंदन रे ।

पदरज को धोने उमडे आते लोचन में जल-कण रे ।

अक्षत पुलकित रोम मधुर मेरी पीडा का चन्दन रे ।

स्नेहभरा जलता है झिलमिल मेरा यह दीपक-मन रे ।

मेरे दृग के तारक में नव उत्पन्न का उन्मीलन रे ।

धूप बने उडते जाते हैं प्रतिपल मेरे स्पंदन रे ।

प्रिय-प्रिय जपते अधर, ताल देता पलकों का नर्तन रे ।

- महादेवी वर्मा

ಯಾವ ಪೂಜೆ ಯಾವ ಅರ್ಚನೆ ?
ಆ ಅಪರಿಮಿತನ ಸುಂದರ ಮಂದಿರ
ನಮ್ಮ ಕ್ಷಣಿಕವಾದ ಈ ಜೀವನ.
ನನ್ನ ಉಸಿರುಗಳೇ ಮಾಡುತ್ತವೆ
ಪ್ರತಿದಿನ ಪ್ರಿಯಕರನ ಅಭಿನಂದನೆ
ಪಾದಧೂಳಿ ತೊಳೆಯಲು ಬರುತ್ತವೆ
ಕಣ್ಣಲಿ ಕಣ್ಣೀರ ಅಲೆ ಅಲೆಯು !
ಅಕ್ಷತ ಪುಲಕಿತ ರೋಮ ಮಧುರವೀ
ನನ್ನ ನೋವಿನ ಸುಗಂಧದ ಶ್ರೀಗಂಧ !
ಸ್ನೇಹವು ತುಂಬಿ ಉರಿಯುತಿದೆ
ಚಂಚಲ ನನ್ನ ಮನದ ಜ್ಯೋತಿಯು !
ನನ್ನ ಕಣ್ಣುಗಳ ನಕ್ಷತ್ರಗಳಲಿ
ನವ-ಮಿಂಚಿನ ಚಂಚಲತೆಯು !
ಧೂಪ-ದೀಪವಾಗಿ ಹಾರುತಲಿರುತ್ತದೆ
ಪ್ರತಿಕ್ಷಣ ನನ್ನದೀ ಸ್ಪಂದನೆಯು !
ಪ್ರಿಯಾ ಪ್ರಿಯಾ ! ಎನ್ನತವೆ ತುಟಿಗಳು
ತಾಳ-ಹಾಕುತ ಕುಣಿಯುತ್ತವೆ ಕಣ್ಣೋಟಗಳು

- ಮಹಾದೇವಿ ವರ್ಮಾ

ISSN 2320-0371

सौम्य प्रकाशन
'कबीर कुंज' महाबलेश्वर कॉलनी,
दर्गा जेल के सामने,
विजयपुर - ५८६१०३ (कर्नाटक)

ಸೌಮ್ಯ ಪ್ರಕಾಶನ
'ಕಬೀರ ಕುಂಜ' ಮಹಾಬಳೇಶ್ವರ ಕಾಲೋನಿ,
ದರ್ಗಾ ಜೇಲು ಮುಂದೆ,
ವಿಜಯಪುರ - ೫೮೬೧೦೩ (ಕರ್ನಾಟಕ)

IQAC Co-ordinator
K.L.E.Society's

...ety's SCP Arts, Sci.& DDS Com. C...
MAHALINGPUR
587312

GRADE-1 PRINCIPAL
K.L.E.Society's